**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂ:**1929/2023**

ಸಿ.ಡಬ್ಲ್ಯೂ–1 ಪಿ.ಡಬ್ಲ್ಯೂ–**1**

| | | |
|---|---|---|
| ಹೆಸರು | ಃ | ಉಲ್ಲಾಸ |
| ತಂದೆಃಗಂಡ | ಃ | ಶಂಕರ |
| ವಯಸ್ಸು | ಃ | ೨೦ ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ15.11.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಮೃತ ನಾಗರಾಜ ನನ್ನ ಗೆಳೆಯ, ಚಾಸಾ-2 ರಿಂದ 12 ರವರ ಪರಿಚಯ ಇರುತ್ತದೆ.

ದಿ.18.01.2023 ರಂದು ಮೃತ ನಾಗರಾಜ ಕೆಲಸದ ನಿಮಿತ್ತ ಆಳಂದಕ್ಕೆ ಹೋಗಬೇಕೆಂದು ನನ್ನನು ಕರೆದಿದ್ದರಿಂದ ನಾನು ಮತ್ತು ಮೃತ ನಾಗರಾಜರವರು ದ್ವಿಚಕ್ರವಾಹನದ ಮೇಲೆ ನಮ್ಮ ದಾರಿಯಲ್ಲಿ ಹೋಗುತ್ತಿರುವಾಗ ಅಪಘಾತ ಆಗಿರುತ್ತದೆ. ನಾನು ಚಾಸಾ-11 ರವರಿಗೆ ಕರೆ ಮಾಡಿ ಅಪಘಾತದ ವಿಷಯ ತಿಳಿಸಿದ್ದು, ಚಾಸಾ-10 ರವರು ಬಂದು ಅಂಬುಲೆನ್ಸನ್ನು ಕರೆಯಿಸಿ ನನ್ನನ್ನು ಮತ್ತು ಮೃತ ನಾಗರಾಜರವರನ್ನು ಕಾಮರೆಡ್ಡಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಂತರ ಪೋಲಿಸರು ಬಂದು ತನಿಖೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ನಾಗರಾಜರವರು ನಂತರ ತೀರಿಕೊಂಡಿರುತ್ತಾರೆ. ನ್ಯಾಯಾಲಯದಲ್ಲಿರುವ 1ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಸಾಕ್ಷಿಗೆ ಅವರು ನೀಡಿದ ದೂರನ್ನು ತೋರಿಸಿ ಅದನ್ನು ಗುರುತಿಸಿದ್ದರಿಂದ ದೂರನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತಪಡಿಸಿದ ಕಾರು ಮತ್ತು ಅಪಘಾತಕ್ಕೆ ಒಳಗಾದ ದ್ವಿಚಕ್ರ ವಾಹನದ ಫೋಟೊಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ-**2** ರಿಂದ **9** ಎಂದು ಗುರುತಿಸಲಾಯಿತು**.**

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನಾನು ಹಾಗೂ ಮೃತ ನಾಗರಾಜರವರು ದಿ.**18.01.2023** ರಂದು ಮಧ್ಯಾಹ್ನ **2.00** ಗಂಟೆಗೆ ಮೋಟರ ಸೈಕಲ ಸಂಖ್ಯೆ ಕೆಎ-**32**/ಎಚಎ-**6216** ಮೇಲೆ ಹೋಗುತ್ತಿದ್ದು ಮೃತ ನಾಗರಾಜರವರು ವಾಹನ ಚಲಾಯಿಸುತ್ತಿದ್ದು ನಾನು ಹಿಂದೆ ಕುಳಿತಿದ್ದೆ ಎಂದರೆ ಸರಿ**.** ಆಳಂದ ದಾಟಿ ಬೋಳನಿ ಕ್ರಾಸ ಹತ್ತಿರ ಅಂದಾಜು **1**

ಕಿ.ಮೀ ಅಂತರದಲ್ಲಿ ಮದ್ಯಾಹ್ನ **3.00** ಗಂಟೆಗೆ **1**ನೇ ಆರೋಪಿ ಅತಿ ವೇಗ ಹಾಗೂ ನಿಶ್ಕಾಳಜಿತನದಿಂದ ವಾಹನವನ್ನು ಚಲಾಯಿಸಿಕೊಂಡು ಬಂದು ನಮಗೆ ಅಪಘಾತಪಡಿಸಿರುತ್ತಾನೆ ಎಂದರೆ ಸರಿ.ಅಪಘಾತ ಆಗಿದ್ದರಿಂದ ನಾವಿಬ್ಬರೂ ಮೋಟರ ಸೈಕಲದಿಂದ ಕೆಳಗೆ ಬದಿದ್ದರುತ್ತೇವೆ ಎಂದರೆ ಸರಿ. ಸದರಿ ಅಪಘಾತದಿಂದ ನನಗೆ ಮೊಳಕಾಲು ಕೆಳಗೆ ಮತ್ತು ಪಾದದ ಹತ್ತಿರ ಭಾರಿ ಗುಪ್ತಗಾಯ ಆಗಿತ್ತು ನಂತರ ಎಡಗಣ್ಣಿನ ಹತ್ತಿರ ಗುಪ್ತ ಗಾಯ, ಮೈಮೇಲೆ ಅಲ್ಲಲ್ಲಿ ತರಚಿದ ಗಾಯ ಆಗಿತ್ತು ಎಂದರೆ ಸರಿ. ಮೃತ ನಾಗರಾಜರವರಿಗೆ ತಲೆಗೆ, ಮುಖಕ್ಕೆ ಭಾರಿ ಗುಪ್ತಗಾಯ ಆಗಿ ಬಲಗಾಲು ಮುರಿದಂತೆ ಆಗಿತ್ತು ಎಂದರೆ ಸರಿ. ಸದರಿ ನಾಗರಾಜರವರಿಗೆ ಪ್ರಜ್ಞೆ ತಪ್ಪಿತ್ತು ಎಂದರೆ ಸರಿ. ಕಾರಿನ ಚಾಲಕ ಮುಂದೆ ಹೋಗಿ ನಿಲ್ಲಿಸಿ ನಮ್ಮ ಬಳಿ ಬಂದಿರುತ್ತಾರೆ ಎಂದರೆ ಸರಿ. ಅವರ ಹೆಸರು ವಿಚಾರಿಸಿದಾಗ ಅವರ ಹೆಸರು ಅಜಯಕುಮಾರ ತಂದೆ ಮಲ್ಲಿಕಾರ್ಜುನ ಮಾಳಗೆ, ಸಾಃ ಮುನ್ನೊಳ್ಳಿ ಎಂದು ತಿಳಿಸಿರುತ್ತಾರೆ. ಸದರಿ ಕಾರ ನಂ.ಕೆಎ-**36**/ಎಂ**6566** ಇತ್ತು ಎಂದರೆ ಸರಿ. ಸದರಿ ಜಾಗದಲ್ಲಿ ಬಹಳ ಜನರು ಸೇರಿದ್ದರಿಂದ ಕಾರು ಚಾಲಕ ಅಲ್ಲಿಂದ ಕಾರನ್ನು ತೆಗೆದುಕೊಂಡು ಹೊಗಿರುತ್ತಾನೆ ಎಂದರೆ ಸರಿ.

ನಾನು ದಿ.**25.01.2023** ರಂದು ರಾತ್ರಿ **8.42** ರ ಸುಮಾರಿಗೆ ನಾನು ಮೃತ ನಾಗರಾಜರವರು ತೀರಿಕೊಂಡ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

(ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದುಡಲಾಯಿತು)

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.